**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 27.06.2021**

# ಅಕ್ರಮವಾಗಿ ಗಾಂಜಾ ಬೆಳೆದ ಆರೋಪಿತನ ಬಂಧನ

ದಿನಾಂಕ: 27.06.2021 ರಂದು 12:00 ಗಂಟೆಗೆ ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ನಾಗಠಾಣ ಗ್ರಾಮದ ಮಂಜುನಾಥ ತಂ ಕಾಶೀನಾಥ ಪಾಟೀಲ್ ಇವನು ತನ್ನ ಜಮೀನದಲ್ಲಿ ಅಕ್ರಮವಾಗಿ ಗಾಂಜಾ ಮಾದಕ ವಸ್ತುವಿನ ಗಿಡಗಳನ್ನು ಬಿತ್ತಿ ಬೆಳೆದಿರುತ್ತಾನೆ ಅಂತಾ ಖಚಿತ ಮಾಹಿತಿ ಬಂದ ಮೇರೆಗೆ, ಈ ವಿಷಯ ಕುರಿತು ಶ್ರೀ. ಅನುಪಮ್ ಅಗ್ರವಾಲ್, ಪೊಲೀಸ ಅಧೀಕ್ಷಕರು ವಿಜಯಪುರ, ಮತ್ತು ಶ್ರೀ ಆರ್.ಎಲ್.ಅರಸಿದ್ದಿ, ಹೆಚ್ಚುವರಿ ಪೊಲೀಸ ಅಧೀಕ್ಷಕರು ವಿಜಯಪುರ, ರವರ ಮಾರ್ಗದರ್ಶನದಲ್ಲಿ ಶ್ರೀ. ಕೆ.ಸಿ.ಲಕ್ಷ್ಮೀನಾರಾಯಣ ಡಿ.ಎಸ್.ಪಿ ವಿಜಯಪುರ ಇವರ ನೇತೃತ್ವದಲ್ಲಿ ಶ್ರೀ ಎಸ್.ಬಿ.ಪಾಲಭಾವಿ ಸಿಪಿಐ ವಿಜಯಪುರ ಗ್ರಾಮೀಣ ವೃತ್ತ, ಶ್ರೀ ಜಿ.ಎಸ್.ಉಪ್ಪಾರ ಪಿಎಸ್ಐ ಗ್ರಾಮೀಣ ಪಿ.ಎಸ್. ಹಾಗೂ ಸಿಬ್ಬಂಧಿ ಜನರಾದ ಎಚ್.ಸಿ 484 407, ಪಿಸಿ 406, 538, 833, 513, 638 ಹಾಗೂ ಸರಕಾರಿ ಪಂಚರು ಸೇರಿಕೊಂಡು ಬಾತ್ಮಿ ಬಂದ ಸ್ಥಳ ನಾಗಠಾಣ ಗ್ರಾಮಕ್ಕೆ ಹೋಗಿ ದಾಳಿ ಮಾಡಿ, ಆರೋಪಿತನ ಜಮೀನದಲ್ಲಿ ಅಕ್ರಮವಾಗಿ ಬೆಳೆದ 22 ಹಸಿ ಗಾಂಜಾ ಗಿಡಗಳು, ಅವುಗಳ ಒಟ್ಟು ತೂಕ 50 ಕೆಜಿ 200 ಗ್ರಾಂ ಇದ್ದು, ಅದರ ಅ॥ಕಿ॥ 3,20,000/- ರೂಪಾಯಿ ಕಿಮ್ಮತ್ತಿನ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದುಕೊಂಡಿದ್ದು ಇರುತ್ತದೆ.

**ಆರೋಪಿತನಾದ**

1] **ಮಂಜುನಾಥ ತಂ ಕಾಶೀನಾಥ ಪಾಟೀಲ್ ವಯಾ 35 ವರ್ಷ ಸಾ:ನಾಗಠಾಣ, ಇತನನ್ನು ದಸ್ತಗೀರ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ.**

ಈ ಕುರಿತು ಶ್ರೀ ಜಿ.ಎಸ್.ಉಪ್ಪಾರ ಪಿಎಸ್ಐ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ ರವರು ಕೊಟ್ಟ ಪಿರ್ಯಾದಿ ಮೇರೆಗೆ, ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಗುನ್ನಾ ನಂ 175/2021 ಕಲಂ 25(ಎ) ಎನ್.ಡಿ.ಪಿ.ಎಸ್. ಆ್ಯಕ್ಟ್ ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು ಇರುತ್ತದೆ.

ಈ ದಾಳಿ ಪ್ರಕರಣದಲ್ಲಿ ಕರ್ತವ್ಯ ನಿರ್ವಹಿಸಿದ ಎಲ್ಲ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಜನರನ್ನು ಮಾನ್ಯ ಪೊಲೀಸ್ ಅಧಿಕ್ಷಕರು ಶ್ಲಾಘಿಸಿ ಸೂಕ್ತ ಬಹುಮಾನವನ್ನು ಘೋಷಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು
ವಿಜಯಪುರ ಜಿಲ್ಲೆ

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು


ವಿಜಯಪುರ ಗ್ರಾಮೀಣ ಪೋಲೀಸ್ ಠಾಣೆ